# ಚೋಂಗ

ಗೋಪಾಲ ಪೆರಾಜೆ
ಕಲೆ: ಈಶ್ವರ ಬಡಿಗೇರ



ಆ ಮನುಷ್ಯ ಸಭಾಂಗಣ ಪ್ರವೇಶಿಸುತ್ತಿದ್ದಂತೆ ಸುತ್ತೆಲ್ಲ ಮೌನ ಆವರಿಸಿತು. ಒಂದೇ ಸಮನೆ ಫೋಟೊಗಳ ಕ್ಲಿಕ್ಕಿಸಲಾಗುತ್ತಿತ್ತು. ಎಲ್ಲರೂ ಮೂಕವಿಸ್ಮಿತರಾಗಿ ನೋಡುತ್ತಿದ್ದರು. ಆತ ಯಾವುದೋ ಗುಡ್ಡದ ಗುಹೆಯೊಂದರಿಂದ ನೇರ ಇಲ್ಲಿಗೆ ಬಂದಿರಬೇಕು. ಕೆದರಿದ ತಲೆ, ಮುಖದ ತುಂಬೆಲ್ಲ ಕೆಂಚು ಕೂದಲು, ಒಣ ಹುಲ್ಲಿನ ಮುದ್ದೆಯ ತಲೆಗೆ ಅಂಟಿಸಿದಂತಿತ್ತು. ಬಿಳಿ ಹುಬ್ಬುಗಳು, ಕರ್ರಗಿನ ಕಣ್ಣುಗಳು, ಬಿಳಿಚಿಕೊಂಡಂತಿದ್ದ ತುಟಿಗಳು, ಆತ ಧರಿಸಿದ ಬಟ್ಟೆ ಒಗೆಯದೆ ಎಷ್ಟೋ ದಿನಗಳಾಗಿರಬೇಕು. ಮೊಣಕಾಲ ತನಕದ ತುಂಡು ಬಟ್ಟೆ, ಹೆಗಲಲ್ಲಿ ಮಣ್ಣು ಮೆತ್ತಿ ಕೆಂಪಾದ ಶಾಲು. ಮೈ ಇತ್ತೀಚೆಗಂತೂ ನೀರು ಕಂಡಂತಿರಲಿಲ್ಲ. ಯಾವುದೋ ಪ್ರಾಣಿಯ ಮೈ ಕಮಟು ವಾಸನೆಯೊಂದು ಸಭಾಂಗಣವನ್ನು ಆವರಿಸುತ್ತಿದೆ. ಆತನನ್ನು ಕರೆದುಕೊಂಡು ಬಂದಿದ್ದ ಕಾರಿನವ ಕಾರಿನ ಸೀಟುಗಳನ್ನು ಒದ್ದೆ ಬಟ್ಟೆಯಲ್ಲಿ ಮುಖ ಸಿಂಡರಿಸಿಕೊಂಡು ಮತ್ತೆ ಮತ್ತೆ ಉಜ್ಜುತ್ತಾ, ಬಟ್ಟೆಯನ್ನು ನೀರಿನ ಬಕೆಟಿಗೆ ಮತ್ತೆ ಮತ್ತೆ ಮುಳುಗಿಸಿ ಎತ್ತಿ ಹಿಂಡುತ್ತಿದ್ದುದನ್ನು ಕಾಣಬಹುದಿತ್ತು.

ಚಂಗಪ್ಪ ಯಾನೆ ಚೆಂಗ ಯಾನೆ ಚೋಂಗ ತುಟಿ ಮೆಲ್ಲ ಅದುರಿದಂತಾಗಿ ಎಲ್ಲರತ್ತ ಗಂಭೀರವಾಗಿ ನೋಡಿದ. ಇಡೀ ವಾತಾವರಣ ಸ್ತಬ್ಧಗೊಂಡಿದೆ. ಮುಂದೆ ಸುದೀರ್ಘ ಪಯಣದ ಕತೆ "ನಾನು ಮಾನವರ ಮಧ್ಯೆ ಕುಳಿತಿಲ್ಲ" ಎಂದೆನಿಸಿತವನಿಗೆ. ಅವನ ಕಣ್ಣುಗಳಲ್ಲಿ ಸಿಟ್ಟಿತ್ತು. ಅಲ್ಲಿ ಸೂಜಿ ಬಿದ್ದರೂ ಕೇಳಿಸುವಷ್ಟು ಮೌನ.

ಚೋಂಗನ ಊರು, ಆತನ ಕುಟುಂಬದ ಬಗ್ಗೆ ಯಾರಿಗೂ ಅಷ್ಟೊಂದು ಗೊತ್ತಿರಲಿಲ್ಲ. ಆತನ ಹಿಂದಿನ ತಲೆಮಾರಿನವರು ಊರ ತೋಟಗಳ ನಿರ್ಮಾಣ ಕೆಲಸಕ್ಕೆ ಬಂದಿದ್ದರಂತೆ. ಆಗಷ್ಟೇ ಮಲೆನಾಡಿನ ಗದ್ದೆ ಬಯಲುಗಳ, ನದಿ ತೋಡುಗಳ ಇಕ್ಕೆಲಗಳಲ್ಲಿ ಉದ್ದಕ್ಕೂ ಅಡಿಕೆ ತೆಂಗು ತೋಟಗಳ ನಿರ್ಮಾಣ ಭರದಿಂದ ಸಾಗುತ್ತಿತ್ತು. ಭತ್ತದ ಗದ್ದೆಗಳು ನಿಧಾನವಾಗಿ ಕರಗಿ ಕಣ್ಮರೆಯಾಗುತ್ತಿದ್ದವು. ಆ ದಿನಗಳಲ್ಲಿ ಚೊಂಗನ ಕುಟುಂಬಸ್ಥರು ಊರ ಧನಿಕನೊಬ್ಬನ ಮನೆಯ ತೋಟದ ನಿರ್ಮಾಣದ ಕೆಲಸ ಕಾಂಟ್ರಾಕ್ಟ್ ತೆಗೆದುಕೊಂಡಿದ್ದರಂತೆ. ಅವರು ಅದಕ್ಕಾಗಿ ಗುಡ್ಡವೊಂದನ್ನು ಅರ್ಧಭಾಗ ಸೀಳಬೇಕಿತ್ತು. ಅದು ಶುಕ್ಲ ಪಕ್ಷದ ಸಮಯ. ಹಗಲು ರಾತ್ರಿ ನಿರಂತರ ಮಣ್ಣಿನ ಕೆಲಸ. ಇದು ಪೂರೈಸಲು ಆಗದು ಎಂಬ ನಿರ್ಧಾರದೊಂದಿಗೆ ಆ ಕೆಲಸಗಾರರ ಕುಟುಂಬಗಳು ರಾತ್ರೋ ರಾತ್ರಿ ಊರು ತೊರೆದು ಪೇಟೆ ಸೇರಿದ್ದಾರೆ. ಆದರೆ ತಾನು ಚಿಕ್ಕಂದಿನಿಂದಲೇ ಓಡಾಡಿ ಬೆಳೆದಿದ್ದ ಆ ಊರು, ಹರಿವ ನದಿ, ನದಿಯೊಳಗಿನ ಮೀನುಗಳು, ಮರದ ಮೇಲಿನ ಹಕ್ಕಿಗಳು, ಎಲ್ಲವನ್ನೂ ನೆನೆದು ಚೋಂಗ ಅದೇ ಊರಿಗೆ ಮತ್ತೆ ಹಿಂತಿರುಗಿದ. ಯಾರ್ಯಾರದೋ ಕೊಟ್ಟಿಗೆಗಳಲ್ಲಿ ಮಲಗಿ ನಿದ್ರಿಸಿ ತೋಟದ ಮಾಲಿಕರ ಮನೆಗಳಿಗೆ ಕೆಲಸಕ್ಕೆ ಹೋಗುತ್ತಾ ಅವರಿವರ ಕೈಕಾಲು ಹಿಡಿದು ಪುಟ್ಟ ಗುಡಿಸಲೊಂದನ್ನು ನದಿಯ ದಡದ ಎತ್ತರ ಜಾಗದಲ್ಲಿ ಕಟ್ಟಿಕೊಂಡಿದ್ದ.

ಆ ಮನೆಗೆ ಗೋಡೆ ತೆರದಿ ಚೌಕಾಕಾರದ ವಾಟೆ ತಡಿಕೆ. ಮೆತ್ತಿದ ಹುತ್ತದ ಕೆಂಪು ಮಣ್ಣು. ಅದರೊಳಗೆ ಕೋಣೆಗಳೇನೂ ಇರಲಿಲ್ಲ. ಅದರ ಒಂದು ಮೂಲೆಯಲ್ಲಿ ಮೂರು ಕಲ್ಲುಗಳ ಜೋಡಿಸಿಟ್ಟ ಒಲೆ, ಒಂದೆರಡು ನಗ್ಗಿದ ಪಾತ್ರೆಗಳು. ಅಲ್ಲೆ ಪಕ್ಕದಲ್ಲಿ ಸೌದೆಯ ತುಂಡುಗಳು. ಯಾರ ತೋಟದಿಂದಲೋ ಬೇಡಿ ತಂದ ಅಡಿಕೆ ಗರಿಗಳ ಹೊದಿಕೆ ಮನೆಗಿತ್ತು. ಆ ಪುಟ್ಟ ಗುಡಿಸಲು ಬೇಸಿಗೆಯ ಬಿರು ಬಿಸಿಲಿಗೆ ತಂಪಾಗಿಯೂ, ಮಳೆ ಚಳಿಗಾಲಗಳಲ್ಲಿ ಕೊರೆವ ಚಳಿಗೆ ಬಿಸಿಯಾಗಿಯೂ ಇರುತ್ತಿತ್ತು. ಆಟಿ ತಿಂಗಳ ಜಡಿ ಮಳೆಗೆ ಒಮ್ಮೊಮ್ಮೆ ಹತ್ತಾರು ನೀರ ಹನಿಗಳು ತೊಟ್ಟಿಕ್ಕುತ್ತಿದ್ದವಷ್ಟೆ. ಅಲ್ಲಿ ಚೋಂಗನಷ್ಟೇ ಇರಲಿಲ್ಲ. ಗುಡಿಸಲ ಸಂದುಗಳಲ್ಲಿ ಇಲಿಗಳು ವಾಸಿಸುತ್ತಿದ್ದವು. ಅವುಗಳನ್ನರಸಿ ಹಾವುಗಳು ಪ್ರತ್ಯಕ್ಷವಾಗುತ್ತಿದ್ದವು. ಓತಿಕ್ಯಾತ, ಹಾವುರಾಣಿ, ಮನೆಕಪ್ಪೆಗಳು ಮನೆಯ ನಿತ್ಯದ ಅತಿಥಿಗಳಾಗಿದ್ದರು.

ಚೋಂಗ ಮಾತ್ರ ಮನೆಯ ಕೆಳಭಾಗದಲ್ಲಿ ಹರಿಯುತ್ತಿದ್ದ ಆ ನದಿಯ ಪಿಸು ಮಾತುಗಳ, ಅದರ ಮಧುರ ಹಾಡುಗಳ ಒಮ್ಮೊಮ್ಮೆ ಅದರ ಆರ್ತನಾದಗಳ ಬಲ್ಲವನಾಗಿದ್ದ. ವರ್ಷ ಋತುವಿನಲ್ಲಿ ಭೋರ್ಗರೆಯುವ ಆ ನದಿ ಹೇಮಂತದಲ್ಲಿ ಮೌನವಾಗಿ ಹರಿಯುತ್ತಾ ವಸಂತದಲ್ಲಿ ಬಹು ನಿಧಾನವಾಗಿ ಚಲಿಸುತ್ತಿತ್ತು. ಬೇಸಿಗೆಯ ದಿನಗಳಲ್ಲಂತೂ ನದಿ ತಾನೇ ಕಣ್ಣೆತ್ತಿ ಆಗಸವನ್ನು ನೋಡುತಿತ್ತು. ಎತ್ತರದ ಬಯಲಲ್ಲಿ ಆಗಾಗ ಚಲಿಸುವ ಮೋಡಗಳು, ಕೆಲವು ಕಪ್ಪು